

ನಿರ್ದೇಶಕ: ರೀ ನೀವು ಸಿನಿಮಾದಲ್ಲಿ ಹೇಳೋ ಸಂಭಾಷಣೆ ಜ್ಞಾಪಕ ಇದೆಯೇನ್ರಿ?
ನಟ: ಸರ್ ನನ್ನದು ಗಂಡನ ಪಾತ್ರ. ಯಾವ ಮಾತೂ ಇಲ್ಲ, ಮಾತೇನಿದ್ರೂ ಹೆಂಡತಿ ಪಾತ್ರದ್ದು.

★★★

ಬಾಸ್: ರೀ ಶಿಲ್ಪಾ ನಿಮಗೇನಾದ್ರೂ ಕೆಲ್ಸ ಮಾಡಬೇಕಂತ ಮ್ಯಾನೇಜರ್ ಹೇಳಿದ್ದರೇನ್ರಿ?
ಶಿಲ್ಪಾ: ಸರ್ ನೀವು ಬಂದ ತಕ್ಷಣ ಎಬ್ಬಿಸು ಅಂದಿದ್ರು.

★★★

ನಟಿ: ರೀ ಮೇಕಪ್ ಮ್ಯಾನ್ ನಾನು ಬಂದು ಎಷ್ಟು ಹೊತ್ತಾಯ್ತು? ನೀವು ಮೇಕಪ್ ಮಾಡಲೇ ಇಲ್ವಲ್ರೀ?
ಮೇಕಪ್ ಮ್ಯಾನ್: ಮೇಡಂ ಈ ದೃಶ್ಯದಲ್ಲಿ ದೆವ್ವದ ಪಾರ್ಟಲ್ವ ನಿಮ್ಗೆ? ಅದ್ಕೇ ಸಹಜವಾಗಿರಲಿ ಅಂತ ಮೇಕಪ್ ಮಾಡಲಿಲ್ಲ!

★★★

ಗಂಡ: ಲೇ ಜಾನಕೀ ದೇವಸ್ಥಾನದಲ್ಲಿ ಸ್ವಾಮೀಜಿ ಪ್ರವಚನ ಕೇಳೋಕೆ ಅಂತ ಹೋಗಿದ್ಯಲ್ಲ ಏನಾದ್ರೂ ಉಪಯೋಗ ಆಯ್ತಾ?
ಜಾನಕಿ: ಆಗ್ದೇ ಏನು? ಪಕ್ಕ ಬೀದಿ ರಂಗಮ್ಮನ ಮಗಳು, ಮೂಲೆಮನೆ ಶ್ರೀಕಂಠನ ಮಗನ ಜತೆ ಓಡಿ ಹೋದ ವಿಷ್ಯ ಗೊತ್ತಾಯ್ತು!

**(ಸಂಗ್ರಹ) ಕುಬೇರಪ್ಪ. ಎಂ. ವಿಭೂತಿ, ಹರಿಹರ**

ಪೋಸ್ಟ್ ಮ್ಯಾನ್: ರಂಗಮ್ಮ ಇದಾರಾ?
ಗುಂಡ: ನಾನು ಅವರ ಗಂಡ! ಏನು ವಿಷಯ?
ಪೋಸ್ಟ್‌ಮ್ಯಾನ್: ಅವರಿಗೆ ಸರ್ಕಾರದಿಂದ ವಿಧವಾ ಪೆನ್ಷನ್ ಹಣ ಬಂದಿದೆ, ಕರೀರಿ.

★★★

ಗೆಳೆಯ: ಆಸ್ಪತ್ರೆಗೆ ಬಂದಿರುವ ರೋಗಿಗಳ ಸಂಖ್ಯೆ 20. ಆದರೆ ಡಾಕ್ಟ್ರು 40 ಅಂತ ಲೆಕ್ಕ ಮಾಡ್ತಾ ಇದಾರಲ್ಲ ಯಾಕೆ?
ಗುಂಡ: ಅವರು ಲೆಕ್ಕ ಮಾಡ್ತಾ ಇರೋದು ರೋಗಿಗಳನ್ನಲ್ಲ, ಅವರ ಕಿಡ್ನಿಗಳನ್ನು.

★★★

ಗುಂಡ: ನನ್ನ ಹೆಂಡತಿಯ ಮೈತೂಕ ಹೆಚ್ಚಾಗಿರೋದಕ್ಕೆ ಡಾಕ್ಟರು ನನಗೆ ಸಿಕ್ಕಾಪಟ್ಟೆ ಬೈದರು.
ಗೆಳೆಯ: ಅಯ್ಯೋ ದೇವರೇ ನಿನ್ನನ್ನು ಯಾಕೆ ಬೈದರು?
ಗುಂಡ: ದಿನಾ ಮನೆಯಲ್ಲಿ ಅಡುಗೆ ಮಾಡಿ ಅವಳಿಗೆ ಊಟ ಹಾಕೋದು ನಾನೇ ತಾನೇ?

★★★

ಉಪಾಧ್ಯಾಯರು: ಗುಂಡ ಸಾಹಿತ್ಯದ ಬಗ್ಗೆ ನಿನಗೇನು ಗೊತ್ತು ಹೇಳು?
ಗುಂಡ: ದಾಸ ಸಾಹಿತ್ಯ, ವಚನ ಸಾಹಿತ್ಯ.
ಉಪಾಧ್ಯಾಯರು: ವೆರಿ ಗುಡ್! ಹಾಗಾದರೆ ವಚನ ಸಾಹಿತ್ಯದ ಬಗ್ಗೆ ಹೇಳು ನೋಡೋಣ?
ಗುಂಡ: ಏಕ ವಚನ, ಬಹುವಚನ.

★★★

ಹೆಂಡತಿ: ರೀ ಯಾಕ್ರೀ ನಾನು ರೂಮಿಗೆ ಬರುತ್ತಿದ್ದ ಹಾಗೆ ರೇಡಿಯೋ ಬಂದ್ ಮಾಡ್ತೀರಾ?
ಗುಂಡ: ಏಕ ಕಾಲಕ್ಕೆ ಎರಡು ರೇಡಿಯೋಗಳು ಮಾತನಾಡುವುದು ನನಗೆ ಇಷ್ಟವಾಗುವುದಿಲ್ಲ!

★★★

ಹೆಂಡತಿ: ಏನ್ರೀ ಹಿಂದಿನ ರಸ್ತೆಯ ನಾಗಮಣಿ ಗಂಡ ಆತ್ಮಹತ್ಯೆ ಮಾಡಿಕೊಂಡರಂತೆ.
ಗುಂಡ: ಪಾಪ ಮತ್ತೆ ಇನ್ನೇನು ಮಾಡ್ತಾನೆ! ಅವನಿಗೆ ನನ್ನಷ್ಟು ತಾಳ್ಮೆ ಇಲ್ಲವಲ್ಲ!

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**

**ಹೊಸ ವರ್ಷದ ಸಂಕಲ್ಪ**

ಗುಂಡನನ್ನು ಯಾರೋ ಕೇಳಿದರು 'ಈ ಹೊಸ ವರ್ಷದ ಸಂಕಲ್ಪ ಅಂದ್ರೆ ಪ್ಲಾನ್ ಏನು?'
ಗುಂಡ : ಅಂತಾ ವಿಶೇಷ ಪ್ಲಾನ್ ಏನು ಇಲ್ರಿ... ಹೋದ ವರ್ಷ ಯೂರೋಪ್‌ಗೆ ಹೋಗಲಿಕ್ಕೆ ಆಗಲಿಲ್ಲ... ಈ ವರ್ಷ ಅಮೆರಿಕಾಕ್ಕೂ ಹೋಗಲ್ಲ...!

★★★

ಪ್ರತಿದಿನ ಸ್ವಲ್ಪ ಆದ್ರೂ ವ್ಯಾಯಾಮ ಮಾಡಬೇಕು ಅಂತ ಗುಂಡ ಆಲೋಚನೆ ಮಾಡಿದ. ಆಮೇಲೆ ಅಂದುಕೊಂಡ ಸೋಮವಾರದಿಂದ ಶುರುಮಾಡೋಣ ಅಂತ. ಆಮೇಲೆ ಡೈರೆಕ್ಟ್ ಆಗಿ ಒಂದನೇ ತಾರೀಖಿನಿಂದ ಶುರುಮಾಡೋಣ ಅಂದುಕೊಂಡ. ನಂತರ ಶುರು ಮಾಡೋ ಹಾಗಿದ್ರೆ ಹೊಸ ವರ್ಷದಿಂದಲೇ ಯಾಕಾಗಬಾರದು ಅಂದುಕೊಂಡ. ಬೆಳಿಗ್ಗೆ ಎದ್ದು ನೋಡ್ತಾನೆ ಹೊಸವರ್ಷ, ಒಂದನೇ ತಾರೀಖು, ಸೋಮವಾರ ಎಲ್ಲಾ ಒಂದೇ ದಿನ ಬಂದಿದೆ. ಇವತ್ತು ವ್ಯಾಯಾಮ ಶುರು ಮಾಡಲೇ ಬೇಕು ಬೇರೆ ದಾರಿಯೇ ಇಲ್ಲ ಅಂದುಕೊಂಡ. ಆಗ ನೆನಪಾಯ್ತು, ಅಯ್ಯೋ ನಮ್ಮ ಹೊಸ ವರ್ಷ ಶುರು ಆಗೋದು ಯುಗಾದಿಗೆ ಅಲ್ವೇ ಅಂತ... ಅದಕ್ಕೇ ಗುಂಡ ಸುಮ್ಮನಿದ್ದಾನೆ ಮತ್ತೇನೂ ಇಲ್ಲ!

★★★

ಐಸಿಯುನಲ್ಲಿದ್ದವನ ರಾಶಿಫಲ ನೋಡಿದಾಗ ಅದರಲ್ಲಿ ಹೀಗಿತ್ತು... ಇಂದು ನಿಮಗೆ ಶುಭದಿನ, ಖರ್ಚಿಲ್ಲದ ದೂರದ ಪ್ರಯಾಣ, ಹಳೆಯ ಬಂಧುಗಳನ್ನು ಸಂಧಿಸುವಿರಿ, ಪ್ರಯಾಣಕ್ಕೆ ಯಾವುದೇ ಅಡೆತಡೆ ಇರುವುದಿಲ್ಲ.

**(ಸಂಗ್ರಹ) ಪೂರ್ಣಿಮಾ ಆರ್ ಹೆಜಮಾಡಿ**